# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ :** ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ಮಂಜೂರಾಗಿರುವ ಮೌಲಾನಾ ಅಜಾದ್ ಮಾದರಿ ಶಾಲೆಗಳನ್ನು ಸ್ಥಳಾಂತರಿಸಿ ಆದೇಶ ಹೊರಡಿಸುವ ಕುರಿತು.

**ಓದಲಾಗಿದೆ:** 1. ಸರ್ಕಾರದ ಆದೇಶ ಸಂಖ್ಯೆ: ಎಂಡಬ್ಲ್ಯೂಡಿ 271 ಎಂಡಿಎಸ್ 2018, ದಿನಾಂಕ: 25-04-2018.

2. ನಿರ್ದೇಶಕರು, ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯ ಇವರ ಏಕಕಡತ ಪ್ರಸ್ತಾವನೆ ಸಂಖ್ಯೆ:ಅಸಂನಿ/ಅ/ಮೌ.ಶಾ/ಸ್ಥಳಾಂತರ/ಸಿಆರ್-10 /2021-22, ದಿನಾಂಕ:04-10-2021.

<><><>

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮ ಸಂಖ್ಯೆ(1)ರಲ್ಲಿ ಸರ್ಕಾರದ ಆದೇಶ ದಿ:25-04-2018ರಲ್ಲಿ 2018-19ನೇ ಸಾಲಿನಲ್ಲಿ 100 ಮೌಲಾನಾ ಆಜಾದ್ ಮಾದರಿ ಶಾಲೆಗಳನ್ನು ಪ್ರಾರಂಭಿಸಲು ಸರ್ಕಾರದ ಮಂಜೂರಾತಿ ನೀಡಲಾಗಿರುತ್ತದೆ.

ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ, ಇವರು ಮೇಲೆ ಓದಲಾದ ಕ್ರಮ ಸಂಖ್ಯೆ (2)ರಲ್ಲಿನ ಏಕ ಕಡತದಲ್ಲಿ ಶ್ರೀ. ಪ್ರಸಾದ್ ಅಬ್ಬಯ್ಯ ಮಾನ್ಯ ಶಾಸಕರು, ಹುಬ್ಬಳ್ಳಿ-ಧಾರವಾಡ, ಇವರು ಅತೀ ಹೆಚ್ಚು ಅಲ್ಪಸಂಖ್ಯಾತರ ಸಮುದಾಯದ ಜನರು ವಾಸವಾಗಿರುವ ಹುಬ್ಬಳ್ಳಿ ಪಟ್ಟಣಕ್ಕೆ ಮೌಲಾನಾ ಆಜಾದ್ ಮಾದರಿ ಶಾಲೆಯನ್ನು ಮಂಜೂರು ಮಾಡುವಂತೆ ಕೋರಿದ್ದು, ಬೆಂಗಳೂರು ನಗರ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮೌಲಾನಾ ಆಜಾದ್ ಮಾದರಿ ಶಾಲೆಗಲ್ಲಿ 50 ಕ್ಕಿಂತ ಕಡಿಮೆ ದಾಖಲಾತಿ ಹೊಂದಿರುವ ಈ ಕೆಳಕಂಡ ಶಾಲೆಗಳ ಬಗ್ಗೆ ಮಾಹಿತಿಯನ್ನು ಒದಗಿಸಿ ಮಾನ್ಯ ಶಾಸಕರ ಕೋರಿಕೆಯ ಬಗ್ಗೆ ಸರ್ಕಾರದ ಆದೇಶ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

| ಕ್ರ. ಸಂ | ಶಾಲೆಯ ಹೆಸರು ಮತ್ತು ಸ್ಥಳ | ವಿಧಾನಸಭಾ ಕ್ಷೇತ್ರ | ಒಟ್ಟು ಮಂಜೂರಾತಿ ಸಂಖ್ಯೆ | ಪ್ರಸ್ತುತ 6ನೇ ತರಗತಿಯಿಂದ 9ನೇ ತರಗತಿಯಿಂದ ಒಟ್ಟು ದಾಖಲಾತಿ ಸಂಖ್ಯೆ | ಕಟ್ಟಡ ಮಾಹಿತಿ |
|---|---|---|---|---|---|
| 1 | ಮೌಲಾನಾ ಆಜಾದ್ ಮಾದರಿ ಶಾಲೆ (ಆಂಗ್ಲ ಮಾಧ್ಯಮ), ಕೆ.ಆರ್.ಪುರಂ ಬೆಂಗಳೂರು. | ಕೆ.ಆರ್.ಪುರಂ | 240 | 48 | ಬಾಡಿಗೆ ರಹಿತ |
| 2 | ಮೌಲಾನಾ ಆಜಾದ್ ಮಾದರಿ ಶಾಲೆ (ಆಂಗ್ಲ ಮಾಧ್ಯಮ), ಇಸ್ಲಾಮೀಯ ಮೊಸ್ಕ್ಯು ಬಿಲ್ಡಿಂಗ್, ತಿಲಕನಗರ, ಬೆಂಗಳೂರು. | ಜಯನಗರ | 240 | 50 | ಬಾಡಿಗೆ ರಹಿತ |
| 3 | ಮೌಲಾನಾ ಆಜಾದ್ ಮಾದರಿ ಶಾಲೆ (ಆಂಗ್ಲ ಮಾಧ್ಯಮ), ಕುಂಬಾರಪೇಟೆ, ಕಿಮ್ಸ್ ಆಸ್ಪತ್ರೆ ಎದುರು ಬೆಂಗಳೂರು. | ಚಾಮರಾಜಪೇಟೆ | 240 | 15 | ಬಾಡಿಗೆ ರಹಿತ |

..........2

12/11

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಮೇಲ್ಕಂಡ ಶಾಲೆಗಳ ಪೈಕಿ ಮುಸ್ಲಿಂ ಜನಾಂಗದ ಹಾಗೂ ಅಲ್ಪಸಂಖ್ಯಾತರ ಅತೀ ಕಡಿಮೆ ಜನಸಂಖ್ಯೆ ಹೊಂದಿರುವ ಮೌಲಾನಾ ಆಜಾದ್ ಮಾದರಿ ಶಾಲೆ, ಜಯನಗರ ಬೆಂಗಳೂರು, ಈ ಶಾಲೆಯನ್ನು ಹುಬ್ಬಳ್ಳಿ ಪಟ್ಟಣಕ್ಕೆ ಸ್ಥಳಾಂತರಿಸಲು ನಿರ್ಧರಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಎಂಡಬ್ಲ್ಯೂಡಿ 409 ಎಂಡಿಎಸ್ 2021**

**ಬೆಂಗಳೂರು, ದಿನಾಂಕ: 11-11-2021**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಮೌಲಾನಾ ಆಜಾದ್ ಮಾದರಿ ಶಾಲೆ (ಆಂಗ್ಲ ಮಾಧ್ಯಮ) ಇಸ್ಲಾಮೀಯ ಮೊಸ್ಕ್ಯು ಬಿಲ್ಡಿಂಗ್, ತಿಲಕನಗರ, ಬೆಂಗಳೂರು. ಈ ಶಾಲೆಯನ್ನು ಈ ಕೆಳಕಂಡಂತೆ ಹುಬ್ಬಳ್ಳಿ ಪಟ್ಟಣ, ಧಾರವಾಡ ಜಿಲ್ಲೆ ಇಲ್ಲಿಗೆ ಸ್ಥಳಾಂತರಿಸಲು ಆದೇಶಿಸಿದೆ.

**ಮೌಲಾನಾ ಆಜಾದ್ ಮಾದರಿ ಶಾಲೆಯ ವಿವರ.**

| ಕ್ರ.ಸಂ | ಜಿಲ್ಲೆ | ಹಾಲಿ ಮಂಜೂರಾಗಿರುವ ಸ್ಥಳ | ಶಾಲೆಯ ಹೆಸರು | ಸ್ಥಳಾಂತರಿಸಬೇಕಾದ ಸ್ಥಳ | ಮಂಜೂರಾತಿ ಸಂಖ್ಯೆ (ವಿದ್ಯಾರ್ಥಿಗಳ ಸಂಖ್ಯಾಬಲ) |
|---|---|---|---|---|---|
| 1 | ಬೆಂಗಳೂರು ನಗರ | ಇಸ್ಲಾಮೀಯ ಮೊಸ್ಕ್ಯು ಬಿಲ್ಡಿಂಗ್, ತಿಲಕನಗರ, ಬೆಂಗಳೂರು, ಜಯನಗರ ವಿಧಾನ ಸಭಾ ಕ್ಷೇತ್ರ | ಮೌಲಾನಾ ಆಜಾದ್ ಮಾದರಿ ಶಾಲೆ (ಆಂಗ್ಲ ಮಾಧ್ಯಮ) | ಹುಬ್ಬಳ್ಳಿ ಪಟ್ಟಣ, ಧಾರವಾಡ ಜಿಲ್ಲೆ | 240 |

ಇದಕ್ಕೆ ತಗಲುವ ವೆಚ್ಚವನ್ನು 2018-19ನೇ ಸಾಲಿನಲ್ಲಿ ಅಲ್ಪಸಂಖ್ಯಾತರಿಗಾಗಿ ನೂತನ ಹಾಸ್ಟೆಲ್‌ಗಳ ಪ್ರಾರಂಭ ರಾಜ್ಯವಲಯ ಯೋಜನೆಯ ಲೆಕ್ಕಶೀರ್ಷಿಕೆ:2225-03-277-2-64 (059) ರಡಿ ಭರಿಸತಕ್ಕದ್ದು.

**ಕರ್ನಾಟಕ ರಾಜ್ಯಪಾಲರ ಅಜ್ಞಾನುಸಾರ**
**ಮತ್ತು ಅವರ ಹೆಸರಿನಲ್ಲಿ,**

11/11/2021

**(ಮುಕ್ತಾರ್ ಪಾಷ ಹೆಚ್.ಜಿ)**
ಸರ್ಕಾರದ ಅಧೀನ ಕಾರ್ಯದರ್ಶಿ
ಅಲ್ಪಸಂಖ್ಯಾತರ ಕಲ್ಯಾಣ, ಹಜ್
ಮತ್ತು ವಕ್ಫ್ ಇಲಾಖೆ

**ಇವರಿಗೆ:**

1. ಮಹಾಲೇಖಪಾಲರು (ಅ ಮತ್ತು ಇ), ಕರ್ನಾಟಕ, ಬೆಂಗಳೂರು
2. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು

..........3

3. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
4. ನಿರ್ದೇಶಕರು, ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯ, ವಿ.ವಿ.ಗೋಪುರ, ಬೆಂಗಳೂರು ಇವರ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತಕ್ರಮಕ್ಕಾಗಿ.
5. ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಹಾಗೂ ಧಾರವಾಡ ಜಿಲ್ಲೆ
6. ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ. ಬೆಂಗಳೂರು ನಗರ ಹಾಗೂ ಧಾರವಾಡ ಜಿಲ್ಲೆ
7. ಸರ್ಕಾರದ ಕಾರ್ಯದರ್ಶಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
8. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (3), ಬೆಂಗಳೂರು.
9. ಸಮನ್ವಯ ಅಧಿಕಾರಿ, ಅಲ್ಪಸಂಖ್ಯಾತರ ಸಹಾಯವಾಣಿ, (24*7) ವಸಂತನಗರ, ಬೆಂಗಳೂರು.
10. ಶಾಖಾ ರಕ್ಷ ಕಡತ/ಹೆಚ್ಚುವರಿ ಪ್ರತಿ.